ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		1772
ಸದಸ್ಯರ ಹೆಸರು		ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ		23.03.2020
ಉತ್ತರಿಸಬೇಕಾದ ಸಚಿವರು		ಉಪ ಮುಖ್ಯಮಂತ್ರಿ (ಉನ್ನತ ಶಿಕ್ಷಣ)
ಪ್ರಶ್ನೆ		ಉತ್ತರ
ಅ)	ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜುರಾದ ಹುದ್ದೆಗಳೆಷ್ಟು: (ಆಯುಕ್ತರ ಹುದ್ದೆಯಿಂದ ಕಾಲೇಜಿನ ಕೆಳಹಂತದ ಹುದ್ದೆಗಳವರೆಗಿನ ಹುದ್ದೆವಾರು ಸಂಖ್ಯೆ ಒದಗಿಸುವುದು)	ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಹುದ್ದೆವಾರು ಸಂಖ್ಯೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಇವುಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು: (ಹುದ್ದೆವಾರು ಮಾಹಿತಿ ನೀಡುವುದು)	
ಇ)	ಖಾಲಿ ಇರುವ ಹುದ್ದೆಗಳಿಂದ ಇಲಾಖೆಯ ಕೆಲಸ ಕಾರ್ಯಗಳು ಕುಂಠಿತವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?	ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಪ್ರಸ್ತುತ ಇರುವ ಹುದ್ದೆಗಳಿಂದಲೇ ಹೆಚ್ಚುವರಿ ಪ್ರಭಾರ/ಭಾಗಶಃ ನಿಯೋಜನೆ ಮೂಲಕ ನಿರ್ವಹಿಸಲಾಗುತ್ತಿದೆ. ***ಪ್ರಾಂಶುಪಾಲರು:*** ಸರ್ಕಾರದ ಆದೇಶ ಸಂಖ್ಯೆಇಡಿ/121/ಡಿಸಿಇ/2018, ದಿ:11.06.2019 ರಲ್ಲಿ 2019-20 ಮತ್ತು 2020-21ನೇ ಸಾಲಿಗೆ ಒಟ್ಟು-310 ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಲಾಗಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ದಿನಾಂಕ:10.02.2020ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/121/ಡಿಸಿಇ/2018ರಲ್ಲಿ ಕರಡು ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದ್ದು,

ಅಂತಿಮ ನಿಯಮಗಳನ್ನು ಹೊರಡಿಸಿದ ನಂತರ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

ಸಹಾಯಕ ಪ್ರಾಧ್ಯಾಪಕರು:

ಸರ್ಕಾರದ ಪತ್ರ ಸಂಖ್ಯೆ: ಇಡಿ/185/ಡಿಸಿಇ/2018, ದಿನಾಂಕ:03.08.2019 ರಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಒಟ್ಟು-1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ದಿನಾಂಕ:10.02.2020ರ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/257/ಡಿಸಿಇ/2019(ಭಾಗ-3)ರಲ್ಲಿ ಕರಡು ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದ್ದು, ಅಂತಿಮ ನಿಯಮಗಳನ್ನು ಜಾರಿಗೊಳಿಸಿದ ನಂತರ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು (ಕಾರ್ಯಭಾರಕ್ಕನುಗುಣವಾಗಿ) ಭರ್ತಿ ಮಾಡಲು ಕ್ರಮವಹಿಸಲಾಗುವುದು.

ದೈಹಿಕ ಶಿಕ್ಷಣ ಬೋಧಕರು ಮತ್ತು ಗ್ರಂಥಪಾಲಕರು:-

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಬೋಧಕರ ಹಾಗೂ ಗ್ರಂಥಪಾಲಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕಡತ ಸಂಖ್ಯೆ:ಇಡಿ 337 ಯುಇಸಿ 2014ನ್ನು ದಿನಾಂಕ:18.10.2019ರಂದು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿರುತ್ತದೆ. ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ನಂತರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ಬೋಧಕೇತರರ ಹುದ್ದೆಗಳು (ಪ್ರ.ದ.ಸ ಮತ್ತು ದ್ವಿ.ದ.ಸ):

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 123 ಪ್ರಥಮ ದರ್ಜೆ ಸಹಾಯಕರು, 88 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆಯುಕ್ತರಿಗೆ ಅನುಮತಿ ನೀಡಲಾಗಿದೆ.

123 ಪ್ರಥಮ ದರ್ಜೆ ಸಹಾಯಕರು ಮತ್ತು 88 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಹಾಗೂ ಕಲ್ಯಾಣ - ಕರ್ನಾಟಕ ವ್ಯಾಪ್ತಿಯ 21 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವು ಪ್ರಸ್ತುತ ನೇಮಕಾತಿ

		ಅಧಿಸೂಚನೆಯನ್ನು ಹೊರಡಿಸಿರುತ್ತದೆ. ***<u>ಗ್ರೂಪ್-ಡಿ ಹುದ್ದೆಗಳು;</u>*** ದಿನಾಂಕ:22.03.2019 ರ ಸರ್ಕಾರದ ಆದೇಶ ಸಂಖ್ಯೆ: ಆಇ 06 ಟಿಎಫ್‌ಪಿ 2018 ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಆದೇಶಿಸಲಾಗಿರುತ್ತದೆ. ಅದರನ್ವಯ **ಪ್ರಸಕ್ತ ಸಾಲಿನಲ್ಲಿ** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳಗೆದುರಾಗಿ ಒಟ್ಟು-347 ಗ್ರೂಪ್-ಡಿ ಸಿಬ್ಬಂದಿಗಳು ಮತ್ತು 88 ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯ ಮೇರೆಗೆ ಅನುಮತಿ ನೀಡಲಾಗಿದೆ. ಅದರಂತೆ ಕ್ರಮವಹಿಸಲಾಗಿರುತ್ತದೆ. ಅಲ್ಲದೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಒಟ್ಟು-2234 ಗ್ರೂಪ್-ಡಿ ಹುದ್ದೆಗಳು ಖಾಲಿ ಇದ್ದು, ಅವುಗಳಲ್ಲಿ ಅಗತ್ಯವಿರುವ 1524 ಹುದ್ದೆಗಳ ಸೇವೆಯನ್ನು **2020-21 ನೇ ಸಾಲಿನಲ್ಲಿ** ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕಡತ ಸಂಖ್ಯೆ:ಇಡಿ/132/ಯುಇಸಿ/2018ನ್ನು ದಿನಾಂಕ:17.03.2020 ರಂದು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಇಡಿ 40 ಯುಇಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

(8)

ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಕಛೇರಿಯಲ್ಲಿನ ವೃಂದವಾರು ವಿವರ(01-03-2020)

ಕ್ರ.ಸಂ.	ವೃಂದ	ಮಂಜೂರಾದ ಹುದ್ದೆ	ಭರ್ತಿ ಹುದ್ದೆ	ಖಾಲಿ ಹುದ್ದೆ
	ಗ್ರೂಪ್-ಎ			
1	ಆಯುಕ್ತರು	1	1	0
2	ನಿರ್ದೇಶಕರು	1	0	1
3	ಹೆಚ್ಚುವರಿ ನಿರ್ದೇಶಕರು	1	0	1
4	ಮುಖ್ಯ ಆಡಳಿತಾಧಿಕಾರಿಗಳು	1	1	0
5	ಜಂಟಿ ನಿರ್ದೇಶಕರು	8	0	8
6	ಪ್ರಾಂಶುಪಾಲರು ಗ್ರೇ-2	38	0	38
7	ಪ್ರಾಂಶುಪಾಲರು ಗ್ರೇ-1	373	5	368
8	ಉಪ ನಿರ್ದೇಶಕರು	3	0	3
9	ಲೆಕ್ಕಾಧಿಕಾರಿಗಳು	8	3	5
	ಒಟ್ಟು	**434**	**10**	**424**
	ಗ್ರೂಪ್-ಬಿ			
1	ಉಪನ್ಯಾಸಕರುಗಳು	7272	6248	1024
2	ಗ್ರಂಥಪಾಲಕರು	390	282	108
3	ದೈಹಿಕ ಶಿಕ್ಷಣ ನಿರ್ದೇಶಕರು	349	243	106
4	ಸಹಾಯಕ ನಿರ್ದೇಶಕರು	15	15	0
5	ಗೆಜೆಟೆಡ್ ಮ್ಯಾನೇಜರ್‌ಗಳು	146	125	21
6	ಸಹಾಯಕ ಅಂಕಿಅಂಶಗಳ ಅಧಿಕಾರಿ	1	0	1
7	ಲೆಕ್ಕಾಧೀಕ್ಷಕರು	13	11	2
	ಒಟ್ಟು	**8186**	**6924**	**1262**
	ಗ್ರೂಪ್-ಸಿ			
1	ಅಧೀಕ್ಷಕರು	401	351	50
2	ಪ್ರಥಮ ದರ್ಜೆ ಲೆಕ್ಕ ಸಹಾಯಕರು	12	4	8
3	ಪ್ರಥಮ ದರ್ಜೆ ಸಹಾಯಕರು	517	146	371
4	ದ್ವಿತೀಯ ದರ್ಜೆ ಸಹಾಯಕರು	532	289	243
5	ಶೀಘ್ರಲಿಪಿಗಾರರು	13	4	9
6	ಹಿರಿಯ ಬೆರಳಚ್ಚುಗಾರರು	91	48	43
7	ಬೆರಳಚ್ಚುಗಾರರು	363	227	136
8	ಡಾಟ ಎಂಟ್ರಿ ಅಪರೇಟರ್	1	0	1
9	ಹಿರಿಯ ವಾಹನ ಚಾಲಕರು	2	1	1
10	ವಾಹನ ಚಾಲಕರು	9	4	5
11	ಗ್ರಂಥಾಲಯ ಸಹಾಯಕರು	285	2	283
	ಒಟ್ಟು	**2226**	**1076**	**1150**
	ಗ್ರೂಪ್-ಡಿ			
1	ಅಟೆಂಡರ್‌ಗಳು	1309	498	811
2	ಪರಿಚಾರಕರು	1534	104	1430
	ಒಟ್ಟು	**2843**	**602**	**2241**

ಕಾಲೇಜು ಶಿಕ್ಷಣ ಆಯುಕ್ತರು